ಎಂ.ವಿ.ಸಿ. ನಂ. 179/2022
ಆರ್ ಡಬ್ಲ್ಯು-1

(ಇಂದು ದಿನಾಂಕಃ 03-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲು 4 ನೇ ಎದುರುದಾರರ ಪರ ಶ್ರೀ ವಿ.ಆರ್.ಎಮ್. ವಕೀಲರಿಂದಃ</u>**

ನಾನು ಮತ್ತು ಮೃತ ಉಮೇಶ ಪವಾರ ಗಂಡ ಹೆಂಡತಿ ಎಂದು ತೋರಿಸಲು ಮದುವೆಯ ಪ್ರಮಾಣ ಪತ್ರ, ಮದುವೆಯ ಆಮಂತ್ರಣ ಪತ್ರಿಕೆ ಹಾಜರು ಪಡಿಸಿಲ್ಲ. ಸಾಕ್ಷಿ ಮುಂದುವರಿದು ಆಧಾರ ಕಾರ್ಡ ಹಾಜರು ಪಡಿಸಿದ್ದೇನೆ ಎಂದು ಹೇಳುತ್ತಾರೆ. ನಾನು ಅಪಘಾತದ ನಂತರ ಪೋಲೀಸ ಠಾಣೆಗೆ ಹೋಗಿದ್ದೆ ಆದರೆ ನಾನು ಮೃತ ಉಮೇಶನ ಹೆಂಡತಿ ಎಂದು ದೂರು ನೀಡಿಲ್ಲ. ಅಪಘಾತ ಆಗಿ 3-4 ದಿನಕ್ಕೆ ಪೋಲೀಸ ಠಾಣೆಗೆ ಹೋಗಿದ್ದೆ. ನಾನು ಪೋಲೀಸ ಠಾಣೆಗೆ ಹೋಗಿದ್ದೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ. ನಾನು ಅನಂತಪುರದಲ್ಲಿ ಮತ್ತು ಪುಣೆಯಲ್ಲಿ ವಾಸ ಆಗಿದ್ದೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ. 2 ಮತ್ತು 3 ನೇ ಎದುರುದಾರರು ನನ್ನ ಮತ್ತು ಮೃತ ಉಮೇಶನ ದಾಂಪತ್ಯ ಜೀವನದ ಫಲವಾಗಿ ಜನಿಸಿದ್ದಾರೆ ಎಂದು ತೋರಿಸಲು ಶಾಲಾ ದಾಖಲಾತಿ ಹಾಜರು ಪಡಿಸಿಲ್ಲ. ನಾನು ರಮೇಶ ಪವಾರ ರವರನ್ನು ಯಾವ ದಿನದಂದು ಯಾವ ಸ್ಥಳದಲ್ಲಿ ಮದುವೆ ಆಗಿದೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ.

4 ನೇ ಎದುರುದಾರರಾದ ಪಾರ್ವತಿ ಉಮೇಶನ ಹೆಂಡತಿಯಾಗಿದ್ದು ನಾನು ಉಮೇಶರವರಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಎದುರುದಾರರು ಮೃತ ಉಮೇಶನ ಆಧಾಯದ ಮೇಲೆ ಅವಲಂಬಿತರು ಆಗಿರಲಿಲ್ಲ, 4 ನೇ ಮತ್ತು 7 ನೇ ಎದುರುದಾರರು ಮಾತ್ರ ಉಮೇಶನ ಅವಲಂಬಿತರು ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.